




## ವಸುಂಧರಾ ಕದಲೂರು

ಕಲೆ: ಸೌಮ್ಯಪ್ರಭು ಕಲ್ಯಾಣ್ಕರ್


# ನಾಲ್ಕು ದಿನದ ಒಲವು

ಆ ನಾಲ್ಕು ರೆಕ್ಕೆಗಳು ಎಷ್ಟು
ನಾಜೂಕು ಮತ್ತೆಷ್ಟು ಪಾರದರ್ಶಕ!
ಆ ನುಣುಪಿಗೆ ಸೋಜಿಗಪಟ್ಟೆ
ನಡುನಡುವೆ ಯಾರೋ ಹಾಕಿ
ಹೋದಂತಿತ್ತು ಚೆಂದದ ಪಟ್ಟೆ!

ಹಿಡಿದು ಮುದ್ದು ಮಾಡಲೂ
ಭಯ ಕಿತ್ತು ಬಂದರೆ ರೆಕ್ಕೆ
ಹೊಳಪು ತುಸು ಕುಂದಿದರೆ
ಏನು ಚೆಂದ ಆ ಹೊಳೆವ ಪಕ್ಕೆ

ಹೂ ಹೂ ಹೂ ಗೆ ಹಾರಿ
ಹನಿ ಮಕರಂದ ಹೀರಿ
ಪಕಳೆ ಒಳಗೆ ಮತ್ತೊಂದು
ಪಕಳೆ ರೆಕ್ಕೆ ಬಿಚ್ಚಿ ಕೂತು
ಹೂವಿಗಿದು ಬಣ್ಣ ತುಂಬಿತೋ
ಹೂವಿನಿಂದ ಬಣ್ಣ ಪಡೆಯಿತೋ
ಅಚ್ಚರಿಗೆ ಕಣ್ಣು ಅರಳಿತು

ಅದರ ಪಾಡಿಗೆ ಅರಳುವ ಹೂ
ಇದರ ಪಾಡಿಗೆ ಹಾರುವ ಚಿಟ್ಟೆ
ಯಾವ ರಾಗಕೆ ಬೆಸೆದವೋ... ಹೂ
ಚಿಟ್ಟೆಯಾಗಿ ಚಿಟ್ಟೆ ಹೂವಾಗಿ
ನಾಲ್ಕು
ದಿನ ಬದುಕಿ ಒಲವಾದವು.

